ಅಧ್ಯಾಪಕರು – ೨ (ಮುಖ್ಯೋಪಧ್ಯಾಯರೂ ಸೇರಿ)

(ಇ) ಶಾಲೆಗೆ ಬೇಕಾದ ಸಿಬ್ಬಂದಿಯನ್ನು ವಿದ್ಯಾ ಇಲಾಖೆಯು ಒದಗಿಸಿದೆ. ವಸತಿ ನಿಲಯಗಳ ಸೌಲಭ್ಯವನ್ನು ಈ ವರ್ಷ ಒದಗಿಸಲಾಗುವುದು.

(ಈ) ೧೨-೧೧-೧೯೮೨ ರಿಂದ ೩೧-೭-೧೯೮೩ (೯ ತಿಂಗಳು) ವರೆಗೆ ರೂ. ೨೫,೨೪೨-೦೦ ಸಿಬ್ಬಂದಿಗೆ ಖರ್ಚಾಗಿದೆ,

ಮೊಳಕಾಲ್ಮೂರಿನ ಶ್ರೀಮತಿ ಮರಿಯಮ್ಮ ಅವರಿಂದ ಕಾಲೇಜು ಕಟ್ಟಡದ ನಿರ್ಮಾಣಕ್ಕೆ ರೂ. ೨೦,೦೦೦ ಕೊಟ್ಟಿರುವುದು.

೩೭(೬೬) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೊಳಕಾಲ್ಮೂರಿನ ಶ್ರೀಮತಿ ಮರಿಯಮ್ಮ ಇವರು ಸುಮಾರು ೧೨ ವರ್ಷಗಳ ಹಿಂದೆ ಕಾಲೇಜು ಕಟ್ಟಡ ಕಟ್ಟುವುದಕ್ಕೆ ೨೦ ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ನಿಜವೇ ?

(ಆ) ಹಾಗಿದ್ದಲ್ಲಿ ತ್ವರಿತವಾಗಿ ಕಟ್ಟಡ ಪ್ರಾರಂಭಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

(ಇ) ಮೊಳಕಾಲ್ಮೂರಿಗೆ ಮೊದಲನೇ ದರ್ಜೆ ಕಾಲೇಜು ಮಂಜೂರು ಮಾಡಬಹುದಾಗಿ ಇಲಾಖೆಯವರು ತಿಪಾರಸು ಮಾಡಿರುವುದು ನಿಜವೇ ?

(ಈ) ಹಾಗಿದ್ದಲ್ಲಿ ಈವರೆಗೂ ಸದರಿ ಕಾಲೇಜನ್ನು ಮಂಜೂರು ಮಾಡದೆ ಇರುವುದಕ್ಕೆ ಕಾರಣಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಹೌದು.

(ಆ) ತ್ವರಿತವಾಗಿ ಕಟ್ಟಡ ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ತದರ್ತಾಗಿ ಬೇಕಾದ ಕೊಠಡಿಗಳ ನಕ್ಷೆ ಮತ್ತು ಅಂದಾಜು ತಯಾರಾಗುತ್ತಿದ್ದು, ಈ ವರ್ಷವೇ ಕಾರ್ಯ ಆರಂಭಿಸಲು ನಿರ್ದೇಶನ ನೀಡಲಾಗುವುದು.

(ಇ) ಹೌದು.

(ಈ) ಸ್ಥಳಾಭಾವ ಮತ್ತು ಹಣಕಾಸಿನ ಕೊರತೆಗಳಿಂದ ಇದುವರೆಗೆ ಕಾಲೇಜು ಮಂಜೂರಾಗಿಲ್ಲ.

ದಾವಣಗೆರೆಯಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರುಗಳ ನೇಮಕಾತಿ

೨೮ (೧೮೪). ಶ್ರೀ ಪಂಪಾಪತಿ (ದಾವಣಗೆರೆ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ದಾವಣಗೆರೆಯಲ್ಲಿರುವ ಎಲ್ಲಾ ಪ್ರೈಮರಿ ಪ್ರೌಢಶಾಲೆ, ಕಾಲೇಜು ಹಾಗೂ ತಾಂತ್ರಿಕ ಶಾಲೆಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರನ್ನು ನೇಮಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

(ಆ) ಶಾಲಾ ಕಾಲೇಜುಗಳಲ್ಲಿ ಆಟದ ಮೈದಾನ, ಯೋಗ್ಯ ಪ್ರಯೋಗ ಶಾಲೆ, ಮತ್ತು ಪುಸ್ತಕ ಭಂಡಾರಗಳು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಇ) ಈ ಅಗತ್ಯಗಳನ್ನು ಪೂರೈಸಲು ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ?

(ಈ) ದಾವಣಗೆರೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಉಪಯೋಗಕ್ಕೋಸ್ಕರ ಯೋಗ್ಯವಾದ ಸಂಸಜ್ಜಿತವಾದ ಕ್ರೀಡಾಂಗಣ ಆಟದ ಮೈದಾನಗಳು ಇವೆಯೆ, ಇವುಗಳ ಸಂಖ್ಯೆ ಎಷ್ಟು ?

(ಉ) ಸುಸಜ್ಜಿತ ಕ್ರೀಡಾಂಗಣವನ್ನು ಒದಗಿಸಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ಮತ್ತು ಈ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಸರ್ಕಾರದವರಿಗೆ ಇನ್ನೂ ಎಷ್ಟು ಕಾಲಾವಕಾಶ ಬೇಕಾಗಿದೆ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ ಮತ್ತು ಜಿಲ್ಲಾ ನೇಮಕಾತಿ ಸಮಿತಿಗಳು ನೇಮಕಾತಿ ಸಮಿತಿಗಳು ನೇಮಕಾತಿ ಮಾಡಬೇಕಾಗುತ್ತವೆ. ಜಿಲ್ಲಾ ನೇಮಕಾತಿ ಸಮಿತಿಗಳನ್ನು ಇದೀಗ ರಚಿಸಲಾಗಿದೆ. ಹಾಗೂ ಪ್ರಾಥಮಿಕ ಶಿಕ್ಷಣದಲ್ಲಿ ಖಾಲಿ ಇರುವ ಹುದ್ದೆಗೆ ೀಘ್ರದಲ್ಲಿಯೇ ನೇಮಕಾತಿ ಮಾಡುವ ನಿರೀಕ್ಷೆ ಇದೆ.

(ಆ) ಶಾಲೆಗಳಲ್ಲಿ ಈ ಅನುಕೂಲತೆಗಳು ಸಾಕಷ್ಟು ಪ್ರಮಾಣದಲ್ಲಿಲ್ಲ.

(ಇ) ಹಣಕಾಸಿನ ಅನುಕೂಲತೆಯನ್ನು ಅವಲಂಬಿಸಿ ಹಂತ-ಹಂತದಲ್ಲಿ ಅಗತ್ಯತೆಗಳನ್ನು ಪೂರೈಸಲು ಪರಿಶೀಲಿಸಬೇಕಾತ್ತದೆ.

(ಈ) ೧೪ ಆಟದ ಮೈದಾನಗಳು ಇವೆ.

(ಉ) -ಡಿಟೋ-

ಅರಸೀಕೆರೆ ಕ್ಷೇತ್ರದಲ್ಲಿ ೧೯೮೧-೮೨, ೧೯೮೨-೮೩ ಸಾಲಿಂಗಳಲ್ಲಿ ಕೂಲಿಗಾಗಿಕಾಳು ಯೋಜನೆಯಲ್ಲಿ ಕಟ್ಟಿಸಿರುವ ಪಾಠಶಾಲೆಗಳು

೨೯ (೩) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಅರಸೀಕೆರೆ ಕ್ಷೇತ್ರದಲ್ಲಿ ೧೯೮೧-೮೨, ೮೨-೮೩ರಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕಟ್ಟಿಸಿರುವ ಪಾಠಶಾಲೆಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ಶಿಥಿಲವಾಗಿರುವ ಪಾಠಶಾಲೆಗಳ ಸಂಖ್ಯೆಗಳು ಎಷ್ಟು ಮತ್ತು ಶಿಥಿಲವಾಗಲು ಕಾರಣಗಳೇನು ?

(ಇ) ಈಗಿನ ಪರಿಸ್ಥಿತಿಯಲ್ಲಿ ಕಟ್ಟಿಸಿರುವ ಕಟ್ಟಡಗಳಲ್ಲಿ ಪಾಠಶಾಲೆ ನಡೆಸಲು ಸಾಧ್ಯವಿದೆಯೇ ?

(ಈ) ಹಾಗಿದ್ದರೆ ಈ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಇ.ಹೆಚ್.ಎಸ್.—ಇಲ್ಲ. ಇ.ಎ.ಎಸ್.—೯.

(ಆ) ಇಲ್ಲ.

(ಇ) ಇದೆ.

(ಈ) ೯.

ರಾಜ್ಯದಲ್ಲಿ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳು

೮೦ (೪೮) ಶ್ರೀ ಜೆ. ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಗ್ರಂಥಪಾಲಕರ ಹುದ್ದೆಗಳು ಹಾಗೂ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಖಾಲಿ ಇರುವುದು ನಿಜವೇ ?

(ಆ) ಹಾಗಿದ್ದರೆ, ಗ್ರಂಥಾಪಾಲಕರ ಕೊರತೆ ಏನಾದರೂ ಇದೆಯೆ ?

(ಇ) ಹಾಗಿಲ್ಲದಿದ್ದಲ್ಲಿ ಇದುವರೆವಿಗೂ ಖಾಲಿ ಜಾಗಗಳನ್ನು ತುಂಬದಿರಲು ಕಾರಣಗಳೇನು ?

(ಈ) ಈಗ ಹಾಲಿ ಇದ್ದ ಖಾಲಿ ಜಾಗಗಳು ಎಷ್ಟು ? ಅವುಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?